Indian Journal of History and Archaeology

ISSN (E):2582-225X
Vol-1, Issue 2, September-October, 2019, 78-83

# ಕರ್ನಾಟಕ ಪ್ರವಾಸಿಗರ ಕನಸಿನ ಸ್ವರ್ಗ: ಒಂದು ವಿಶ್ಲೇಷಣೆ

**ಡಾ. ನಾಗಪ್ಪ . ವಿ**

**ಡಾ. ನಾಗಪ್ಪ .ವಿ**
ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಶ್ರೀನಿವಾಸಪುರ.

ಕರ್ನಾಟಕ ಭಾರತದ ಪ್ರವಾಸೋದ್ಯಮದಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ಭಾರತದ ಸಾಂಸ್ಕೃತಿಕ ಸಾಮಾಜಿಕ ಐತಿಹಾಸಿಕವಾಗಿ ಪ್ರವಾಸಿ ತಾಣಗಳನ್ನು ಹೊಂದಿದ್ದು, ಪ್ರಾಚೀನ ಕಾಲದಿಂದಲೂ ಗಾಂಭೀರ್ಯದಿಂದಲು, ಸಂಪತ್ತಿನಿಂದಾಗಿ ಕೆಲವು ಪ್ರವಾಸಿಗರನ್ನು ಆಕರ್ಷಿಸುತ್ತಲೆ ಇದೆ. ಪ್ರಪಂಚದಾದ್ಯಂತ ಕೆಲವರಿಗಂತೂ ಭಾರತ ಅವರ ಕನಸಿನ ಸ್ವರ್ಗವಾಗಿದೆ. ಇಲ್ಲಿ ಎಲ್ಲಿ ನೋಡಿದರಲ್ಲಿ ಸಪ್ತ ವರ್ಣಗಳ ನೋಟಗಳು, ರಮಣೀಯ ದೃಶ್ಯಗಳು ಸೌಂದರ್ಯ ತಾಣಗಳು ವಿಶ್ವದ ಎಲ್ಲಾ ಆಕರ್ಷಣೆಗಳಗೂ ಹೆಸರು ವಾಸಿಯಾಗಿದೆ.ಕೆಲವು ದೇಶಗಳಂತು ಕೆಲವು ಋತುಗಳಲ್ಲಿ ಮಾತ್ರ ಪ್ರವಾಸಕ್ಕೆ ಯೋಗ್ಯವಾಗಿರುತ್ತವೆ. ಭಾರತ ಎಲ್ಲಾ ಋತುಗಳಲ್ಲಿ ಸರಿ ಹೊಂದುವ ದೇಶ ಭಾರತ ಒಂದೇ ಭಾರತದ ಭೂ ಪಟದಲ್ಲಿ ಕರ್ನಾಟಕ ವಿಶ್ವಮಾನ್ಯತೆ ಪಡೆದಿದೆ. ಭುವನ ಸುಂದರಿ ಭಾರತೀಯ ಮುದ್ದಿನ ಮಗಳು ಕನ್ನಡತಿ ತನ್ನ ತಾಯಿಯ ಎಲ್ಲಾ ಚೆಲವನ್ನು ಒಡಲಲ್ಲ ದರಿಸಿದ್ದಾಳೆ, ಚರಿತ್ರೆಯ ಆರಂಭದಿಂದಲೂ ಕರ್ನಾಟಕ ಭರತ ವರ್ಷದ ಅವಿಭಾಜ್ಯ ಅಂಗವಾಗಿದ್ದು ಸಾಂಸ್ಕೃತಿಕ ಮತ್ತು ಚಾರಿತ್ರಿಕವಾಗಿ ಬೇರೆ ಪ್ರದೇಶಗಳಂತೆ ಕರ್ನಾಟಕವು ಪ್ರವಾಸಿಗರ ಸ್ವರ್ಗವಾಗಿದೆ.

ಪ್ರವಾಸೋದ್ಯಮ ಜಗತ್ತಿನ ಪ್ರಮುಖ ಉದ್ಯಮಗಳಲ್ಲಿ ಒಂದಾಗಿ ಪ್ರಸ್ತುತ ಪಡೆದುಕೊಳ್ಳುತ್ತಿರುವ ಪ್ರಾಮುಖ್ಯತೆಯಂತೂ ಅಭೂತ ಪೂರ್ವ. ಪ್ರವಾಸ ಯಾರಿಗೂ ಹೊಸದಲ್ಲ ಪ್ರವಾಸ ಮನುಷ್ಯರ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಪ್ರವಾಸದ ಅನುಭವವೂ ಆಹ್ಲಾದಕರ, ಹಲವು ಧಾರ್ಮಿಕ ಕ್ಷೇತ್ರಗಳು, ತೀರ್ಥ ಕ್ಷೇತ್ರಗಳು ಬಹು ಹಿಂದಿನಿಂದಲೂ ಪ್ರವಾಸದ ಪ್ರಮುಖ ಆಕರ್ಷಣೀಯ

ಕೇಂದ್ರಗಳಾಗಿವೆ. ನಂತರದ ಘಟ್ಟದಲ್ಲಿ ಇತಿಹಾಸದ ನೆಲೆಗಳು ಸಹಾ ಈ ಪಟ್ಟಿಗೆ ಸೇರ್ಪಡೆಯಾದವು. ಈಗ ಪ್ರಾಕೃತಿಕ ಪ್ರದೇಶಗಳೂ ಪ್ರವಾಸದ ತೆಕ್ಕೆಗೆ ಸೇರಿಕೊಂಡಿದೆ. ಐತಿಹಾಸಿಕ, ಪ್ರಾಕೃತಿಕ, ಹಾಗೂ ಸಾಂಸ್ಕೃತಿಕ ಪರಂಪರೆ ಇವೆಲ್ಲವೂ ಪ್ರವಾಸೋದ್ಯಮಕ್ಕೆ ಸೇರಿದೆ.

ಭಾರತದಲ್ಲಿ ನಾವು ನೋಡಬಹುದಾದ ಪ್ರವಾಸವನ್ನು ಕರ್ನಾಟಕವೊಂದರಲ್ಲೆ ನೋಡಬಹುದಾಗಿದೆ. ಇಲ್ಲಿನ ಭೌಗೋಳಿಕ ಪರಿಸರವು ವೈವಿಧ್ಯತೆಯಿಂದ ಕೂಡಿದೆ. ರಾಜಸ್ಥಾನ ಮರುಭೂಮಿಯಲ್ಲಿ ನೋಡಬಹುದಾದ ಆಡಬಹುದಾದ ಆಟಗಳಗೆ ಇಲ್ಲಿ ತಲಕಾಡು ಬಳಿಯ ಮರಳು ಶೇಖರಣೆಗೆ ಅವಕಾಶ ಒದಗಿಸಿದೆ. ಸಿಮ್ಲ, ಡಾರ್ಜಲಿಂಗ್, ನೈನಿತಾಲ್ ಹವಾಮಾನ ಪರಿಸರವನ್ನು ಕರ್ನಾಟಕದ ಸ್ವಿಟ್ಜರ್‌ಲ್ಯಾಂಡ್ ಎನಿಸಿರುವ ಕೊಡುಗಿನಲ್ಲಿ ಅನುಭವಿಸುವ ಅವಕಾಶ ಒದಗಿಸಿಕೊಟ್ಟಿದೆ. ಹಾಗೆಯೇ ಸಾಗರದ ಹಿನ್ನಿರ ತಾಣಗಳ ವಿಹಾರಕ್ಕೆ ಕೇರಳಕ್ಕೆ ಹೋಗಬೇಕೆನ್ನುವವರಿಗೆ ಅದೇ ಸೌಲಭ್ಯ ದಕ್ಷಿಣ ಕನ್ನಡ, ಉಡುಪಿಯಲ್ಲಿ ಲಭ್ಯವಿದೆ. ದೆಹಲಿಯ ಸ್ಮಾರಕಗಳಗೆ ಸರಿಗಟ್ಟಬಹುದಾದ ವಿಖ್ಯಾತ ಕಟ್ಟಡಗಳು ಬಿಜಾಪುರದಲ್ಲಿವೆ.

ಉತ್ತರ ಭಾರತ ಮತ್ತು ದಕ್ಷಿಣ ಭಾರತದ ನಾಗರ ಮತ್ತು ದ್ರಾವಿಡ ಶೈಲಿಯ ವಾಸ್ತು ಶಿಲ್ಪದ ವೈಖರಿಯಲ್ಲಿ ಪಟ್ಟದ ಕಲ್ಲಿನಲ್ಲಿ ಕಾಣಬಹುದಾಗಿದೆ. ಮಹಾರಾಷ್ಟ್ರ, ಮಧ್ಯಪ್ರದೇಶಗಳ ಕಣಿವೆ, ದಟ್ಟಾರಣ್ಯ ದೃಶ್ಯ ಇಲ್ಲಿನ ಪಶ್ಚಿಮ ಘಟ್ಟಗಳಲ್ಲಿ ಕಾಣಬಹುದಾಗಿದೆ. ವನ್ಯಜೀವಿ ಸಂಕುಲಗಳಗೂ ಇಲ್ಲಿ ಕೊರತೆಯಿಲ್ಲ ಕಡಲ ತೀರ ಜಲಾಶಯಗಳು, ದೋಣಿ, ವಿಹಾರಗಳಗೂ ಸಾಕಷ್ಟು ಸೌಲಭ್ಯಗಳು ದಕ್ಷಿಣ ಕನ್ನಡ ಕಾರವಾರ ಪ್ರದೇಶಗಳಲ್ಲಿ ನೋಡಬಹುದಾಗಿದೆ.

"ದೇಶ ಸುತ್ತು ಕೋಶ ಓದು" ದೇಶ ನೋಡಿ ಗಳಸುವ ಅನುಭವ, ಕೋಶ ಅಥವಾ ಗ್ರಂಥ ಓದಿ ಪಡೆಯುದಕ್ಕಿಂತ ಉನ್ನತವಾದುದು. ಮಾನವನು ಪಾ ್ರಚೀನ ಕಾಲದಿಂದಲೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವುದು ಕಂಡು ಬರುತ್ತದೆ. ತಾನು ವಾಸಿಸಿರುವ ಸ್ಥಳದಿಂದ ಮತ್ತೊ ್ಂದು ಸ್ಥಳಕ್ಕೆ ಹೋಗಲು ಹಲವಾರು ಕಾರಣಗಳರುತ್ತವೆ. ಆರ್ಥಿಕ, ವ್ಯವಸಾಯ, ವ್ಯಾಪಾರ, ಮತ್ತು ಆರೋಗ್ಯದ ದೃಷ್ಟಿ ಮುಂತಾದ ಕಾರಣಗಳಂದ ಬೇರೆ ಕಡೆ ಹೋಗುವುದು ಕಂಡು ಬರುತ್ತದೆ. ಪ್ರಾಚೀನ ಕಾಲದಲ್ಲಿ ಮಾನವನು ಆಹಾರಕ್ಕಾಗಿ ಮತ್ತು ಜೀವನ ಸಾಗಿಸಲು ಜೀವನ ಸುರಕ್ಷತೆಗಾಗಿ ಬೇರೆ ಬೇರೆ ಕಡೆ ಹೋಗಿರುವುದು ಸಹ ಕಂಡು ಬರುತ್ತದೆ. ಮುಂದುವರೆದಂತೆ ಮಾನವನು ನಾಗರೀಕತೆ ಹೊಂದಿ ವ್ಯಾಪಾರ ಮತ್ತು ವ್ಯವಹಾರ ದೃಷ್ಟಿಯಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದು ಸರ್ವೇಸಾಮಾನ್ಯವಾಗಿತ್ತು. ಹಾಗೆಯೇ ರಾಜರುಗಳ ಕಾಲದಲ್ಲಿ ಅನೇಕ ಪ್ರವಾಸಿಗರು ಹಲವಾರು ರಾಜ್ಯಗಳನ್ನು ಸಂದರ್ಶಿಸಿದ ಉದಾಹರಣೆಗಳು ಕಂಡು ಬರುತ್ತವೆ. ಅಂದರೆ ಪ್ರಾಚೀನ ಕಾಲದಿಂದಲೂ ಪ್ರವಾಸಿಗರು ಪ್ರವಾಸ ಕೈಗೊಳ್ಳುತ್ತಿದ್ದರು ಎಂಬುದು ತಿಳದು ಬರುತ್ತದೆ. ಹಾಗೆಯೇ ಆಧುನಿಕ ಕಾಲದಲ್ಲಿ

ಮಾನವನು ಸಹ ಹಲವಾರು ದೃಷ್ಟಿಯಿಂದ ಪ್ರವಾಸ ಕೈಗೊಳ್ಳುತ್ತಿರುವುದು ಇಂದಿಗೂ ಕಾಣಬಹುದಾಗಿದೆ. ಅಂದರೆ ಶೈಕ್ಷಣಿಕ, ಕೃಷಿ, ಪರಿಸರ, ಸಾಂಸ್ಕೃತಿಕ ಪರಂಪರೆ, ಧಾರ್ಮಿಕ, ವೈದ್ಯಕೀಯ, ಸಸ್ಯ ಮತ್ತು ವನ್ಯಜೀವಿ, ಬಾಹ್ಯಾಕಾಶ ಈ ಎಲ್ಲಾ ದೃಷ್ಟಿಯಿಂದ ಪ್ರವಾಸ ಕೈಗೊಳ್ಳುವುದನ್ನು ನೋಡಬಹುದಾಗಿದೆ.

ಹಿಮಾಲಯದ ತಪ್ಪಲಿನ ತಂಪಾದ ಹವಾಮಾನ ಇಡೀ ದಕ್ಷಿಣ ಭಾರತದಲ್ಲಿ ಅತ್ಯಂತ ಎತ್ತರವಾದ ಬಾಬಾಬುಡನ್‌ಗಿರಿ, ಮುಳ್ಳಯ್ಯನಗಿರಿ, ಸಹ್ಯಾದ್ರಿ, ಕೊಡಚಾದ್ರಿ, ಆಗುಂಬೆ ಮೊದಲಾದ ಕಡೆಗಳಲ್ಲಿ ನೋಡಬಹುದಾಗಿದೆ. ಈ ಭಾಗದಲ್ಲಿ ಅನೇಕ ಗಿರಿಧಾಮಗಳು ಜಲಪಾತಗಳು ಪಕ್ಷಿಧಾಮಗಳು, ವನ್ಯಧಾಮಗಳು ರೂಪಗೊಂಡಿವೆ.ಇಲ್ಲಿ ತುಂಗಭದ್ರ ಕಾವೇರಿ, ಮಲಪ್ರಭ , ಕೃಷ್ಣ ನದಿಗಳು ಮತ್ತು ಜಲ ವಿಹಾರಧಾಮಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಜೋಗ ಜಲಪಾತ ವಿಶ್ವದಲ್ಲೆ ವಿಖ್ಯಾತವಾಗಿ ಆಕರ್ಷಣಿಯವಾಗಿದೆ. ಕರ್ನಾಟಕದ ಕರಾವಳಿ ನೈಸರ್ಗಿಕವಾಗಿ ಸುಂದರ ತೀರಗಳು ಮತ್ತು ಸಣ್ಣ ಸಣ್ಣ ದ್ವೀಪಗಳಿಂದ ಕೂಡಿದೆ. ಸೂರ್ಯಾಸ್ತಮಾನವನ್ನು ಇಲ್ಲಿನ ಆಗುಂಬೆಯಲ್ಲಿ ವೀಕ್ಷಿಸುವುದು ಒಂದು ವಿಶಿಷ್ಟ ದೃಶ್ಯವಾಗಿರುತ್ತದೆ. ದೀಪಾಲಂಕೃತ ಮೈಸೂರು ದಸರಾ ಅರಮನೆ ಮತ್ತು ಕೆ.ಆರ್. ಎಸ್ ಬೃಂದಾವನ ಕೂಡಾ ಪ್ರೇಕ್ಷಣೀಯ ತಾಣಗಳಾಗಿವೆ. ಇವು ಭಾರತದ ಇತರ ಭಾಗಗಳಿಗೂ ಅದರ ಸೊಬಗನ್ನು ನೀಡುತ್ತದೆ. ಕರ್ನಾಟಕ ಸಾಂಸ್ಕೃತಿಕವಾಗಿಯೂ ಶ್ರೀಮಂತವಾಗಿದ್ದು ಭಾರತದಲ್ಲಿ ತನ್ನದೇ ಆದ ಅಗ್ರಸ್ಥಾನವನ್ನು ಪಡೆದಿದೆ. ಬಾದಾಮಿ, ಪಟ್ಟದಕಲ್ಲು, ಹಳೇಬೀಡು, ಸೋಮನಾಥಪುರ, ಬೇಲೂರು, ಹಂಪಿ, ಇಟಗಿ, ಶ್ರವಣಬೆಳಗೊಳ, ದೇವಾಲಯಗಳು ಗುಲ್ಬರ್ಗದ ಮಸೀದಿಗಳ ಹಾಗೂ ಚರ್ಚುಗಳು ಬೇರೆಲ್ಲು ಕಾಣಲಾಗದು.

ಸನಾತನ ಸಂಪ್ರದಾಯಗಳನ್ನು ಆಚಾರ ವಿಚಾರಗಳನ್ನು ಗೌರವಿಸುತ್ತಾ ಹಿಂದೂ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದೆ. ಭರತ ಖಂಡದಲ್ಲಿ 6 ನೇ ಅತದೊಡ್ಡ ರಾಜ್ಯವಾಗಿರುವ ಕರ್ನಾಟಕ ಭೌಗೋಳಿಕ ಅಂಶಗಳಲ್ಲಿ ತನ್ನದೇ ಮಹತ್ವವನ್ನು ಹೊಂದಿದೆ. ಪಶ್ಚಿಮಘಟ್ಟಗಳು ಮತ್ತು ಅರೆಬಿಯಾ ಸಮುದ್ರದ ಅತಿ ಉದ್ದವಾದ ತೀರಪ್ರದೇಶ ಕರ್ನಾಟಕ ರಾಜ್ಯದ ಪಶ್ಚಿಮ ಗಡಿಗಳಾಗಿವೆ. ಉತ್ತರ ಕರ್ನಾಟಕದಲ್ಲಿ ಕೃಷ್ಣ, ತುಂಗ ಭದ್ರ ನದಿಗಳು ದಕ್ಷಿಣದಲ್ಲಿ ಕರ್ನಾಟಕದ ಜೀವನದಿ ಕಾವೇರಿ ನದಿ ಹರಿದು ನಮ್ಮ ರಾಜ್ಯವನ್ನು ಸದಾ ಹಚ್ಚ ಹಸಿರಾಗಿಡುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಕರ್ನಾಟಕ ತನ್ನ ಶ್ರೀಮಂತ ಪರಂಪರೆ ಸಂಸ್ಕೃತಿಗೆ ಚರಿತ್ರೆಗೆ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪ್ರಾಕೃತಿಕ ಸೌಂದರ್ಯಕ್ಕೆ ಎಲ್ಲಕ್ಕಿಂತ ಮಿಗಿಲಾಗಿ ಕರಣಾಳು ಹೃದಯಗಳಾದ ಕನ್ನಡ ಜನತೆಗೆ ಪ್ರಸಿದ್ಧಿ ಪಡೆದಿದೆ. ಕಲೆ ಮತ್ತು ವಾಸ್ತು ಶಿಲ್ಪದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದ ಬಾದಾಮಿ ಚಾಲುಕ್ಯರು ಈ ಭವ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಹೊಯ್ಸಳರಂತು ವಿಶ್ವಚರಿತ್ರೆಯಲ್ಲಿ ಕರ್ನಾಟಕದ

ಕೀರ್ತಿ ಪತಾಕೆಯನ್ನ ಉನ್ನತ ಶಿಖರಕ್ಕೇರಿಸಿದರು. ಈ ಎಲ್ಲಾ ವೈಭವಗಳನ್ನು ಮಿರಿಸಿದವರು ವಿಜಯನಗರ ಚಕ್ರವರ್ತಿಗಳು ಹಂಪಿ ಈ ಅವಶೇಷಗಳ ಕೇಂದ್ರವಾಗಿದೆ. ಮಾನವನಾಗಿ ಹುಟ್ಟಿದ ಮೇಲೆ ಪ್ರಪಂಚ ಜ್ಞಾನ ಹೊಂದಬೇಕಾದುದು ಅವಶ್ಯ ಇದಕ್ಕೆ ಹಿರಿಯರು ಸೂಚಿಸುವ ಎರಡು ಮಾರ್ಗಗಳೆಂದರೆ ಕೋಶ ಒದಬೇಕು ಇಲ್ಲವೆ ದೇಶ ಸುತ್ತಬೇಕು. ಹಿಂದಿನ ಕಾಲದ ಹಿರಿಯರು ಪ್ರವಾಸಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದರು.

ಕರ್ನಾಟಕ ರಾಜ್ಯವು ಪ್ರವಾಸಿಗಳಿಗೆ ಬಹು ಆಕರ್ಷಿಕ ಪ್ರದೇಶ ಏಕೆಂದರೆ ಕರ್ನಾಟಕ ನಿಜವಾಗಿಯು ಚೆಲುವಿನ ನಾಡು ಚಿನ್ನದ ನಾಡು, ದಂತದ ನಾಡು, ಗಂಧದನಾಡು ಚೆಲುವನ್ನು ಸದಾ ಚೆಲ್ಲುವ ನಾಡು ಕನ್ನಡನಾಡು. ನಿಸರ್ಗದ ಚೆಲುವು ನಿಸರ್ಗದ ಭವ್ಯತೆ ನಿಸರ್ಗದ ಶ್ರೀಮಂತಕೆಗೆ ಹೀಗೆ ನಿಸರ್ಗದ ಎಲ್ಲವನ್ನು ಮನದಣಿಯೋ ಇಲ್ಲಿ ಅನುಭವಿಸಬಹುದು.

ಕರ್ನಾಟಕದಲ್ಲಿನ ಪ್ರವಾಸವೆಂದರೆ ಕಣ್ಣಿಗೆ ಇಂಪು. ಮನಕೆ ತಂಪು, ಪಶ್ಚಿಮ ಘಟ್ಟಗಳು, ಜಲಪಾತಗಳು, ಕಾನನಗಳು, ವನ್ಯಮೃಗಧಾಮಗಳು, ದೇವಾಲಯಗಳು, ಕೋಟೆಗಳು, ಅರಮನೆಗಳು, ಸ್ಮಾರಕಗಳು, ಕಲೆ ಸಂಸ್ಕೃತಿ ಉದಾರಭಾವನೆಗಳನ್ನು ಹೊಂದಿರುವ ವಿಶಾಲ ಹೃದಯ ಕನ್ನಡಿಗರದು ಇಲ್ಲಿನ ಅಹ್ಲಾದಕರವಾದ ಹವಾಮಾನದೊಂದಿಗೆ ನಿಸರ್ಗ ನಿರ್ಮಿತ ಪ್ರೇಕ್ಷಣಿಯ ಸ್ಥಳಗಳು ಮಾನವ ನಿರ್ಮಿತ ಪ್ರೇಕ್ಷಣೀಯ ಸ್ಥಳಗಳನ್ನು ನಾವು ಕರ್ನಾಟಕದಲ್ಲಿ ಕಾಣುತ್ತೇವೆ.

ಪ್ರಾಕೃತಿಕ ಪ್ರೇಕ್ಷಣೀಯ ಸ್ಥಳಗಳಲ್ಲಿ ಮುಖ್ಯವಾಗಿ ನಿಸರ್ಗ ಸೌಂದರ್ಯ ತಾಣಗಳಾದ ಆಗುಂಬೆ ಕೋಡಚಾದ್ರಿ, ಮಡಕೇರಿ, ಕೆಮ್ಮಣ್ಣಗುಂಡಿ, ಶಿವಗಂಗೆಬೆಟ್ಟ, ಬಿಳಗಿರಿರಂಗನ ಬೆಟ್ಟ, ನಾಗರಹೊಳೆ, ಬಂಡಿಪುರ, ದಾಂಡೇಲಿ, ಬನ್ನೇರುಘಟ್ಟ, ಮಂಗಳೂರು, ಉಲ್ಲಾಳು, ಕಾರವಾರ, ರಂಗನತಿಟ್ಟು, ಕೊಕ್ಕರೆ ಬೆಳ್ಳೂರು, ಜೋಗಜಲಪಾತ, ಶಿವನಸಮುದ್ರ, ಗೋಕಾಕ್ ಜಲಪಾತ, ಯಾಣಾ ಮೊದಲಾದ ಪ್ರಾಕೃತಿಕ ಸೌಂದರ್ಯ ತಾಣಗಳನ್ನು ನೊಡುವುದೇ ಬಲು ಚಂದಾ. ಹಾಗೇಯೇ ಮಾನವ ನಿರ್ಮಿತ ಪ್ರವಾಸಿ ತಾಣಗಳಲ್ಲಿ ಹಂಪಿ, ಪಟ್ಟದಕಲ್ಲು, ಬಾದಾಮಿ, ಬೀದರ್, ಬಿಜಾಪುರ, ಗುಲ್ಬರ್ಗ, ಮೈಸೂರು, ತಲಕಾಡು, ಶ್ರೀರಂಗಪಟ್ಟಣ, ಚಿತ್ರದುರ್ಗ, ಬನವಾಸಿ, ಕೃಷ್ಣರಾಜಸಾಗರ, ತುಂಗಭದ್ರ, ಅಣೆಕಟ್ಟು, ಕೊಲ್ಲುರು, ಧರ್ಮಸ್ಥಳ, ಉಡುಪಿ, ಶ್ರವಣಬೆಳಗೊಳ, ಮಹದೇಶ್ವರಬೆಟ್ಟ, ಶೃಂಗೇರಿ, ಕುರುಡುಮಲೆ,, ಮೇಲುಕೋಟೆ, ಆದಿಚುಂಚನಗಿರಿ, ಘಾಟಿಸುಬ್ರಮಣ್ಯ ಹೀಗೆ ಕನ್ನಡನಾಡು ಅಂದ ಕನ್ನಡ ಭಾಷೆ ಚಂದಾ, ಪ್ರಾಚೀನ ಕಾಲದಿಂದಲು ಕರ್ನಾಟಕ ಚಾರಿತ್ರಿಕ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪಾರಂಪರೆಗಳಿಗೆ ಹೆಸರುವಾಸಿಯಾಗಿದೆ. ಇಷ್ಟೇ ಅಲ್ಲದೆ ಕರ್ನಾಟಕ ವಿಶ್ವಪರಂಪರೆ ಮಟ್ಟದಲ್ಲಿ ಹೆಸರುಗಳಿಸಿದೆ. ಈ ತಾಣಗಳ ಜೊತೆಗೆ ಯುನೆಸ್ಕೋ ಪಟ್ಟಿಗೆ, ಸಿಗ್ರವೇ ರಾಜ್ಯದ ಪ್ರಮುಖ ಅರಣ್ಯ ಪ್ರದೇಶಗಳನ್ನು ಸೇರ್ಪಡೆಗೊಳಿಸುವ ಪ್ರಯತ್ನಗಳು ನಡೆಯುತ್ತಲಿದೆ.

ಅಪರೂಪ ಜೀವ ಸಂಕುಲವನ್ನು ಹೊಂದಿರುವ ರಾಜ್ಯದ ಪಶ್ಚಿಮ ಘಟ್ಟದ ಪ್ರಮುಖ ಅರಣ್ಯ ಪ್ರದೇಶಗಳನ್ನು ಸಂರಕ್ಷಿಸುವ ನೈಸರ್ಗಿಕ ಹೆರಿಟೇಜ್ ಎಂಬ ಮಹತ್ವದ ಯೋಜನೆಯಡಿ ಪಶ್ಚಿಮಘಟ್ಟದ ಹಲವಾರು ಅರಣ್ಯ ಪ್ರದೇಶಗಳು ವಿಶೇಷ ಸಂರಕ್ಷಣೆಯ ಸವಲತ್ತು ಪಡೆದು ಯುನೆಟೆಡ್ ಜಾಗತಿಕ ವರ್ಲ್ಡ್‌ಹೆರಿಟೇಜ್ ಕನ್‌ವೆನ್ಷನ್ ಪಟ್ಟಿಗೆ ಸೇರಲಿದೆ. ಅವುಗಳೆಂದರೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸೋಮೇಶ್ವರ ವನ್ಯಮೃಗಧಾಮ, ಸೋಮೇಶ್ವರ ಕಾಯ್ದಿಟ್ಟ ಅರಣ್ಯ ಪ್ರದೇಶ. ಪುಷ್ಪಗಿರಿ ವನ್ಯಧಾಮ, ಬ್ರಹ್ಮಗಿರಿ ವನ್ಯಧಾಮ, ತಲಕಾವೇರಿ ವನ್ಯಧಾಮ, ಅರಲಾಮ ವನ್ಯಧಾಮ, ಜಲಹಳ್ಳಿ ಕಾಯ್ದಿಟ್ಟ ಅರಣ್ಯ ಹಾಗೂ ಆಗುಂಬೆ ಕಾಯ್ದಿಟ್ಟ ಅರಣ್ಯ ಭೂ ಪ್ರದೇಶ ಮೊದಲಾದವು.

ಹೀಗೆ ನಿಸರ್ಗದ ಸುಂದರ ಪ್ರದೇಶಗಳನ್ನು ಅಂದಚಂದದ ತಾಣಗಳನ್ನು ಹುಡುಕುತ್ತಾ ಹೋಗುವುದು, ಮಾನವನ ಹವ್ಯಾಸ ಏಕೆಂದರೆ ಪ್ರಕೃತಿ ಹಾಗೂ ಮಾನವನ ಸಂಬಂಧ ಇಂದು ನೆನ್ನೆಯದಲ್ಲ ಅದು ತುಂಬಾ ಹಳಯದಾದ ದಟ್ಟವಾದ ಅರಣ್ಯಗಳು, ವಿಪುಲವಾದ ವನ್ಯ ಸಂಕುಲ ಕಣ್ಮನಸೆಳೆಯುವ ಕಡಲ ತೀರಗಳು ನಯನ ಮನೋಹರ ಗಿರಿ ಕಂದರಗಳು ಎಲ್ಲಕ್ಕೂ ಮಿಗಿಲಾಗಿ ಮನಮುದಗೊಳಸುವ ಸುಂದರ ಜಲಪಾತಗಳು ಇಷ್ಟೆಲ್ಲಾ ನಿಸರ್ಗದ ಕೊಡುಗೆಗಳನ್ನು ಕರ್ನಾಟಕಕ್ಕೆ ಪ್ರಕೃತಿ ನೀಡಿರುವ ವರ ಪ್ರಸಾದವೆಂದೇ ಹೇಳಬಹುದಾಗಿದೆ. ಅದ್ದರಿಂದ ಇಂದು ಪರಿಸರ ಪ್ರವಾಸೋದ್ಯಮದಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ಅವುಗಳನ್ನಾ ಪ್ರವಾಸಿಗರಿಗೆ ತುಂಬಾ ಹತ್ತಿರ ತರವಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಸಂಸ್ಥೆಗಳೇ ಜಂಗಲ್ ಲಾಡ್ಜಸ್ ಅಂಡ್ ರೇಸಾರ್ಟ್ ಕರ್ನಾಟಕದ ಪ್ರವಾಸೋದ್ಯಮವನ್ನು ಬೆಳೆಸಲು ಗಣೀಯ ಕಾಣಿಕೆಗಳನ್ನು ನೀಡುತ್ತಿರುವ ಅತ್ಯಂತ ರಮ್ಯ ತಾಣಗಳಲ್ಲಿ ತನ್ನ ಪ್ರವಾಸಿ ಕೇಂದ್ರಗಳನ್ನು ಹೊಂದಿರುವ ಜಂಗಲ್ ರೇಸಾರ್ಟ್ಸ ವಿದೇಶಿ ಪ್ರವಾಸಿಗರಿಂದಲು ಪ್ರಶಂಶೆ ಪಡೆಯುತ್ತಿರುವುದು ಹಾಗೂ ಪ್ರಾಕೃತಿಕ ಪ್ರಿಯರಿಗೂ ಇವು ವಿಶಿಷ್ಟ ರೀತಿಯ ಆಕರ್ಷಕ ತಾಣಗಳಾಗಿವೆ. ಕಬಿನಿ, ಕಾಳ ಪಾರೆಸ್ಟ್‌ರೆಸಾರ್ಟ್ಸ್, ಕೆ.ಗುಡಿ ರೆಸಾರ್ಟ್ಸ(ಬಿಳಗಿರಿರಂಗನ ಬೆಟ್ಟದ ಕೆಳಾಂಗದಲ್ಲಿ) ಕಾಳ ಬೊರೆ(ಕಾವೇರಿ ನದಿ ತೀರ ಹತ್ತಿರ) ದುಬಾರೆ (ಕೊಡುಗು, ದೇವಾಬಾಗ್ ರೆಸಾರ್ಟ್ಸ್, ಕಾರವಾರ ಹೀಗೆ ಈ ಜಂಗಲ್ ರೆಸಾರ್ಟ್ಸ್ ಪ್ರವಾಸಿಗರ ಕನಸಿನ ಸ್ವರ್ಗವಾಗಿ ಮನರಂಜನೆ ನೀಡುವಲ್ಲಿ ಬಹು ಪ್ರಮುಖ ಪಾತ್ರವಹಿಸಿವೆ.

**ಪರಾಮರ್ಶನ ಗ್ರಂಥಗಳು**

1. ಆನಂದ್. ಎಂ.ಎಂ, ಟೂರಿಸಂ ಅಂಡ್ ಹೋಟಲ್ ಇಂಡಸ್ಟ್ರಿ ಇನ್ ಇಂಡಿಯಾ, 1976
2. ಧರ್ಮರಾಜನ್ ಅಂಡ್ ರವೀಂದ್ರ ಸೇತ್, ಟೂರಿಸಂ ಇನ್ ಇಂಡಿಯಾ ಟ್ರೇಂಡ್ಸ್ ಅಂಡ್ ಇಶ್ಯೂಸ್, 1994.

3. ಗುಪ್ತ. ವಿ. ಕೆ, ಟೂರಿಸಂ ಇನ್ ಇಂಡಿಯ, 1987
4. ನರಸಯ್ಯ ಎಂ, ಎಲ್, ಟೂರಿಸಂ ಅಂಡ್ ಎನ್‌ವಿರಾನ್‌ಮೆಂಟ್, 2003
5. ಸತಿ. ವಿ.ಪಿ, ಟೂರಿಸಂ ಡೆವಲಪ್‌ಮೆಂಟ್ ಇನ್ ಇಂಡಿಯ, 2001.
6. ವಿಲಿಯಂ, ಸಿ ಗಾರ್ಟ್ನರ್, ಟೂರಿಸಂ ಡೆವಲಪ್‌ಮೆಂಟ್, 1996.
7. ಶಿವರುದ್ರಸ್ವಾಮಿ,ಎಸ್.ಎನ್–ಭಾರತೀಯ ಪ್ರವಾಸೋದ್ಯಮ ಸೌರಸ್ತ್ಯ ಪ್ರಕಾಶನ, ಮೈಸೂರು, 2007.
8. ನೀಲಾ ಮಂಜುನಾಥ್ ಕೆ.ಎ.ಎಸ್ (ಸಂ) ಕರ್ನಾಟಕ ಕೈಪಿಡಿ 2012 (ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಬೆಂಗಳೂರು)
9. ಲಿಂಗಮೂರ್ತಿ.ವಿ.ಎಂ. – ಇತಿಹಾಸ ಮತ್ತು ಭಾರತದ ಪ್ರವಾಸೋದ್ಯಮ, 2006.